## ಸೆಲೆಬ್ರಿಟಿ

■ ಹನಿ

# ಸೂಪರ್ ಸಾನಿಯಾ



ಹೆಣ್ಣು ಸುಂದರಿಯೂ, ಪ್ರತಿಭಾವಂತೆಯೂ ಆಗಿದ್ದರೆ, ಗಂಡಸರಿಗೆ ಸಹಿಸಿಕೊಳ್ಳುವುದು ಕಷ್ಟವೆಂದು ಕಾಣುತ್ತದೆ. ಹೈದ್ರಾಬಾದಿನ ಮೂಗುತಿ ಸುಂದರಿ, ಭಾರತದ ಹೆಮ್ಮೆಯ ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಪ್ರಕರಣದಲ್ಲೂ ಇದೇ ಆದಂತಿದೆ. ಆಕೆಯೀಗ ಹೊಸ ತೆಲಂಗಾಣ ರಾಜ್ಯದ ರಾಯಭಾರಿ. ಮುಖ್ಯಮಂತ್ರಿ ಚಂದ್ರಶೇಖರ ರಾವ್ ಹಾಗೆಂದು ಘೋಷಣೆ ಮಾಡಿದಾಕ್ಷಣ ವಿವಾದ ಹುಟ್ಟಿಕೊಂಡಿದೆ. ಬಿಜೆಪಿಯ ಸಂಸದ ಲಕ್ಷ್ಮಣ ಎನ್ನುವವರು 'ಆಕೆ ಪಾಕಿಸ್ತಾನದ ಸೊಸೆ. ಆಕೆಯನ್ನು ರಾಯಭಾರಿ ಮಾಡಿದ್ದು ಸರಿಯಲ್ಲ' ಎಂದು ತಗಾದೆ ತೆಗೆದಿದ್ದಾರೆ. ಮುಸ್ಲಿಮರನ್ನು ದ್ವೇಷಿಸುವುದೇ ಕೆಲವು ಬಿಜೆಪಿ ನಾಯಕರ ದಿನನಿತ್ಯದ ರಾಜಕೀಯವಾಗಿರುವುದರಿಂದ ಈ ಟೀಕೆಯನ್ನು ಕ್ರೀಡಾಪ್ರೇಮಿಗಳು ತಳ್ಳಿಹಾಕಿದ್ದಾರೆ. ಟ್ವಿಟರ್‌ನಲ್ಲಿ ಮತ್ತು ಸಮೂಹ ಮಾಧ್ಯಮಗಳಲ್ಲಿ ಸಾನಿಯಾಗೆ ಭಾರೀ ಬೆಂಬಲ ವ್ಯಕ್ತವಾಗಿದೆ. ಮಹೇಶ್ ಭೂಪತಿಯಂತೂ, 'ಲಕ್ಷ್ಮಣ ಎನ್ನುವವರು ಯಾರೆಂದು ಯಾರಿಗೂ ಗೊತ್ತಿಲ್ಲ. ಈಗ ಅಗ್ಗದ ಪ್ರಚಾರಕ್ಕಾಗಿ ಈ ವಿವಾದ ಸೃಷ್ಟಿಸಿದ್ದಾರೆ. ಒಳ್ಳೇ ಕೆಲಸ' ಎಂದು ವ್ಯಂಗ್ಯವಾಡಿದ್ದಾರೆ. ಸ್ವತಃ ಸಾನಿಯಾ, 'ಇತರರ ಬಗ್ಗೆ ಸಂತೋಷ ಪಡಲಾಗದವರು, ತಮ್ಮೊಳಗೆ ಹುದುಗಿಕೊಂಡಿರುವ ದ್ವೇಷವನ್ನು ನಿವಾರಿಸಿಕೊಳ್ಳಲಾಗದವರು– ಎಲ್ಲರಿಗೂ ಅಲ್ಲಾಹು ಒಳ್ಳೆಯದು ಮಾಡಲಿ' ಎಂದು ಟ್ವೀಟ್ ಮಾಡಿದ್ದಾರೆ.

ಸಾನಿಯಾಳ ಮನೆ ಇರೋದು ಹೈದ್ರಾಬಾದ್‌ನಲ್ಲಿ. ಹೆರಿಗೆ ನೋವಿನಲ್ಲಿ ತೀವ್ರ ತೊಂದರೆಯಾದಾಗ ಆಕೆಯ ಅಮ್ಮನನ್ನು ತುರ್ತಾಗಿ ಮುಂಬೈಗೆ ಕರೆದೊಯ್ಯಲಾಯಿತು. ಹಾಗಾಗಿ ಆಕೆ ಹೆತ್ತದ್ದು ಮುಂಬೈ ಆಸ್ಪತ್ರೆಯಲ್ಲಿ. 3 ವಾರ ಬಳಿಕ ತಾಯಿ–ಮಗು ಹೈದ್ರಾಬಾದಿಗೆ ವಾಪಸಾದರು. ಸಾನಿಯಾ ಬೆಳೆದದ್ದು ಹೈದ್ರಾಬಾದಿನಲ್ಲೇ. ಸಾನಿಯಾಳ ಅಜ್ಜ ಮೊಹಮ್ಮದ್ ಜಾಫರ್ ಮಿರ್ಜಾ, ನಿಜಾಮರ ಹೈದ್ರಾಬಾದ್‌ನಲ್ಲಿ ಎಂಜಿನಿಯರ್ ಆಗಿದ್ದರು. ಮುತ್ತಜ್ಜ ಹೈದ್ರಾಬಾದ್‌ನ ನಗರ ನೀರು ಸರಬರಾಜು ಮಂಡಳಿಯಲ್ಲಿ ಚೀಫ್ ಎಂಜಿನಿಯರ್ ಆಗಿದ್ದು ಗಂಡಿಪೇಟ್ ಡ್ಯಾಮ್ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಜ್ಜನ ಅಜ್ಜ ಅಜೀಜ್ ಮಿರ್ಜಾ, ನಿಜಾಮರ ಆಡಳಿತದಲ್ಲಿ ಗೃಹ ಕಾರ್ಯದರ್ಶಿ ಆಗಿದ್ದು, 1908ರ ಮೂಸಿ ನದೀ ಪ್ರವಾಹದ ಸಂತ್ರಸ್ತರಿಗೆ ಸಾಕಷ್ಟು ನೆರವಾದ ಹೆಗ್ಗಳಿಕೆ ಅವರದ್ದು. ಪಾಕಿಸ್ತಾನದ ಕ್ರಿಕೆಟ್ ಆಟಗಾರ ಶೋಯೆಬ್ ಮಲಿಕ್ 1.37 ಲಕ್ಷ ಅಮೆರಿಕನ್ ಡಾಲರ್ ವಧುದಕ್ಷಿಣೆ ಕೊಟ್ಟು ಸಾನಿಯಾರನ್ನು ಮದುವೆ ಆದದ್ದೂ ಹೈದ್ರಾಬಾದ್‌ನ ತಾಜ್ ಕೃಷ್ಣಾದಲ್ಲಿ. 'ನಾನು ಸಾಯುವವರೆಗೂ ಭಾರತದ ಪ್ರಜೆಯೇ. ಹೀಗೆ ನನ್ನ ದೇಶನಿಷ್ಠೆಯನ್ನು ಶಂಕಿಸುವವರಿಗೆ ಎಷ್ಟು ಬಾರಿ ಉತ್ತರ ಕೊಡಲಿ?' ಎನ್ನುವುದು ಸಾನಿಯಾ ನೋವಿನ ನುಡಿ.

ಹಾಗೆ ನೋಡಿದರೆ ಸಾನಿಯಾಗೆ ವಿವಾದ ಹೊಸದಲ್ಲ. ಈ ಹಿಂದೆ ಈಕೆಯ ಟೆನಿಸ್ ಸ್ಕರ್ಟ್ ವಿರುದ್ಧ ಮೌಲ್ವಿಯೊಬ್ಬರು ಗುರ್ರ್ ಎಂದಿದ್ದರು. ಇಸ್ರೇಲಿನ ಆಟಗಾರ ಶಹರ್ ಪೀರ್ ಜತೆ ಕೋಲ್ಕತ್ತಾದಲ್ಲಿ ಮಿಕ್ಸೆಡ್ ಡಬಲ್ಸ್ ಆಡುವ ಸುದ್ದಿಗೆ ವಿರೋಧಿಸಿದವರಿದ್ದರು. ಇನ್ನೊಮ್ಮೆ ಆಟ ನೋಡುತ್ತಿದ್ದಾಗ ಈಕೆ ಕಾಲ ಮೇಲೆ ಕಾಲು ಹಾಕಿ ಕುಳಿತಿದ್ದು ಪಕ್ಕದಲ್ಲೇ ರಾಷ್ಟ್ರಧ್ವಜ ಇದ್ದುದರ ಬಗ್ಗೆಯೂ ವಿವಾದ ಉಂಟಾಗಿತ್ತು. ವಿವಾದಗಳೇನೇ ಇದ್ದರೂ, ಸಾನಿಯಾಗೆ ಸಾಟಿಯಿಲ್ಲ. ಸಿಂಗಲ್ಸ್‌ನಲ್ಲಿ 27ನೇ ರ್‍ಯಾಂಕ್ ಮತ್ತು ಡಬಲ್ಸ್‌ನಲ್ಲಿ 5ನೇ ರ್‍ಯಾಂಕ್ ಗಳಿಸಿ ವಿಶ್ವಮಟ್ಟದಲ್ಲಿ ಭಾರತಕ್ಕೆ ಕೀರ್ತಿ ತಂದ ಈಕೆಯ ಸಾಧನೆ ಸಾಮಾನ್ಯದ್ದಲ್ಲ.



# ಅರುಂಧತಿ 'ನಕ್ಷತ್ರ'

'ಗಾಂಧೀಜಿ ಜಾತೀವಾದಿಯಾಗಿದ್ದರು. ಅವರ ಅಸಹಕಾರ ಚಳವಳಿ ಜಾತಿ ತಾರತಮ್ಯದ ಆಧಾರದಲ್ಲೇ ರೂಪುಗೊಂಡದ್ದು. ಇಂತಹವರ ಹೆಸರನ್ನು ವಿಶ್ವವಿದ್ಯಾನಿಲಯಗಳಿಗೆ ಏಕೆ ಇಡಬೇಕು?' ಎಂದು ಹೇಳುವ ಮೂಲಕ ಲೇಖಕಿ, ಚಳವಳಿಕಾರ್ತಿ ಅರುಂಧತಿ ರಾಯ್ ಹೊಸ ವಿವಾದವೊಂದನ್ನು ಎಬ್ಬಿಸಿದ್ದಾರೆ. ಬೇರೆ ಯಾರಾದರೂ ಈ ಮಾತನ್ನು ಹೇಳಿ ಅರಗಿಸಿಕೊಳ್ಳುವುದು ಕಷ್ಟ; ಆದರೆ ಅರುಂಧತಿ ಭಾರತದ 'ನಕ್ಷತ್ರ' (ಸ್ಟಾರ್) ಕಾದಂಬರಿಕಾರ್ತಿ. ಹಾಗಾಗಿ ಆಕೆ ಏನು ಹೇಳಿದರೂ ಚೆನ್ನ!

ವಿವಾದದ ಮೂಲಕ ಜನರನ್ನು ಪರ ಅಥವಾ ವಿರೋಧ ಎಂದು ವಿಭಾಗಿಸುವುದರಲ್ಲಿ ಅರುಂಧತಿ ಜಾಣೆಯೇ. ಈ ಹಿಂದೆ 'ಕಾಶ್ಮೀರ ಯಾವತ್ತೂ ಭಾರತದ ಅವಿಭಾಜ್ಯ ಅಂಗವಾಗಿರಲಿಲ್ಲ' ಎಂದು ಭಾಷಣ ಮಾಡಿ, ಅದನ್ನೂ ದಕ್ಕಿಸಿಕೊಂಡಿದ್ದಾಗಿದೆ. ಭಾರತದ ಜಾತಿ ಪದ್ಧತಿಯ ಕಟು ಟೀಕಾಕಾರ್ತಿ ಆಗಿರುವ ಅರುಂಧತಿ, ಸಹಜವಾಗಿಯೇ ಗಾಂಧೀಜಿಯನ್ನೂ ಟೀಕಿಸಿರಬಹುದು. ಆದರೆ ಗಾಂಧೀಜಿ ಇಂತಹ ನೂರಾರು ಟೀಕೆಗಳನ್ನು ನುಂಗಿ ಬೆಳೆದವರು ಎನ್ನುವುದು ಆಕೆಗೆ ಗೊತ್ತಿದ್ದಂತಿಲ್ಲ. 1997ರಲ್ಲಿ ಆಕೆ ಬರೆದ 'ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಕಾದಂಬರಿ ಬೂಕರ್ ಪ್ರಶಸ್ತಿ ಗೆದ್ದಿತು. ಮಾತ್ರವಲ್ಲ, 60 ಲಕ್ಷ ಪ್ರತಿಗಳೂ ಮಾರಾಟವಾದವು! ಕೇರಳ ಮೂಲದ ತಾಯಿ ಮೇರಿ ಹಾಗೂ ಬಂಗಾಳಿ ಬ್ರಾಹ್ಮಣ ತಂದೆಯ ಮದುವೆ ಮುರಿದು ಬಿದ್ದಾಗ ಅರುಂಧತಿಗೆ ಇನ್ನೂ 2 ವರ್ಷ. ಬಡತನದ ಮತ್ತು ಜಾತೀಯ ಅವಮಾನದ ಮಜಲುಗಳನ್ನು ಬಾಲ್ಯದಲ್ಲೇ ಅನುಭವಿಸಿರುವ ಅರುಂಧತಿ ಸದ್ಯಕ್ಕಂತೂ ಭಾರತದ ಬಹುದೊಡ್ಡ ಸುದ್ದಿಜೀವಿ. ಗಾಂಧೀವಿವಾದ ಎತ್ತ ಹೊರಳುತ್ತೋ ನೋಡಬೇಕು. ●



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65